ಓ ಎಸ್ : 35/2015 ಡಿ ಡಬ್ಲ್ಯೂ : 1 - ಎನ್. ರವೀಂದ್ರ

ದಿನಾಂಕಃ 15.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿ ಪರ : ಶ್ರೀ ಎಂ ಎಸ್ ವಕೀಲರಿಂದಃ

2. ನನ್ನ ತಂದೆಯ ಹೆಸರು ನಿಂಗೇಗೌಡ. ಅವರ ತಂದೆಯ ಹೆಸರೂ ಸಹ ನಿಂಗೇಗೌಡ. ನನ್ನ ತಾತ ನಿಂಗೇಗೌಡ ಅವರ ತಂದೆಯ ಹೆಸರು ಜವರೇಗೌಡ. ನನ್ನ ತಂದೆ ನಿಂಗೇಗೌಡ ಅವರ ತಮ್ಮಂದಿರಾದ ನಾಗರಾಜು ಮತ್ತು ಪ್ರಕಾಶ್ ಪೌತಿಯಾಗಿದ್ದಾರೆ ಎಂದರೆ ಸರಿ. ನನ್ನ ತಂದೆಯ ನಿಂಗೇಗೌಡ ರವರ ತಂಗಿ ಸೌಭಾಗ್ಯ ಈ ಕೇಸಿನ 16 ನೇ ಪ್ರತಿವಾದಿ ಈಗಲೂ ಜೀವಂತವಾಗಿರುತ್ತಾರೆ. ಐಟಂ ನಂ.4 ದಾವಾ ಆಸ್ತಿಯನ್ನು ನನ್ನ ತಾತ ನಿಂಗೇಗೌಡ ಬಿನ್ ಜವರೇಗೌಡ ಖರೀದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾತ ನಿಂಗೇಗೌಡ ಬಿನ್ ಜವರೇಗೌಡ 70 ಗುಂಟೆ ಖರೀದಿಸಿ, ಅನುಭೋಗದಲ್ಲಿದ್ದರು ಎಂದು ನುಡಿಯುತ್ತಾರೆ. ಐಟಂ ನಂ.4 ದಾವಾ ಆಸ್ತಿಯನ್ನು ನನ್ನ ತಂದೆ ನಿಂಗೇಗೌಡ ಖರೀದಿಸಿಲ್ಲ ಎಂದರೆ ಸರಿ. ನನ್ನ ತಾತ ನಿಂಗೇಗೌಡ ಬಿನ್ ಜವರೇಗೌಡ ಅವರ 70 ಗುಂಟೆ ಖರೀದಿಸಿದ ಬಗ್ಗೆ ನಾನು ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು 1 ಗುಂಟೆ 22 ಗುಂಟೆಗೆ ಹಾಜರುಪಡಿಸಿದ್ದು, ಅದು ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ನಾನು ಕ್ರಯದಾರನಾಗದ ಕಾರಣ, ನನಗೆ ಅದು ತಪ್ಪಾಗಿದೆ ನಮೂದಾಗಿದೆ ಎಂದು ತಿಳಿದಿಲ್ಲ ಎಂದರೆ ಸರಿ. ಆ ರೀತಿ ತಪ್ಪಾಗಿ ನಮೂದಾಗಿದೆ ಎಂದು ನನ್ನ ತಂದೆ ನಿಂಗೇಗೌಡ ನನ್ನ ಚಿಕ್ಕಪ್ಪಂದಿರಾದ ನಾಗರಾಜು ಮತ್ತು ಪ್ರಕಾಶ್ ಅವರಿಗೂ ತಿಳಿದಿರಲಿಲ್ಲ. ನನ್ನ ತಂದೆಗಾಗಲೀ ಅಥವಾ ನನ್ನ ಚಿಕ್ಕಪ್ಪಂದಿರಾದ ನಾಗರಾಜು ಮತ್ತು ಪ್ರಕಾಶ್ ರವರಿಗಾಗಲೀ ನನ್ನ ತಾತ 70 ಗುಂಟೆ ಖರೀದಿಸಿದ್ದಾರೆ ಎಂದು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ 70 ಗುಂಟೆ ಖರೀದಿಸಿರುವುದು ಗೊತ್ತು. ಆದರೆ ತಪ್ಪಾಗಿ ನಮೂದಾಗಿರುವ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2013-14 ರಲ್ಲಿ ನಾವು ಆಕಾರ್ ಬಂದ್ ಮತ್ತು ಇತರ ದಾಖಲಾತಿಗಳನ್ನು ಪಡೆದು ಸರ್ವೆ ಮಾಡಿಸಲು ಹೋದಾಗ 70 ಗುಂಟೆ ಜಮೀನು 1 ಎಕರೆ 22 ಗುಂಟೆ ಎಂದು ತಪ್ಪಾಗಿ ನಮೂದಾಗಿದೆ ಎಂದು ನಮಗೆ ತಿಳಿದು ಬಂದಿರುತ್ತದೆ. 2013-14 ರಲ್ಲಿ ನಾವು ಆಕಾರ್ ಬಂದ್ ಮತ್ತು ಎಡ-ಬಲ ಕಾಪಿಯನ್ನು ಪಡೆದಿರುವ ದಾಖಲಾತಿ ನನ್ನ ಬಳಿ ಇದ್ದು ನಾನು ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ.

3. ದಿಃ 17.04.1973 ರಲ್ಲಿ 1 ಎಕರೆ 22 ಗುಂಟೆ ಕ್ರಯ ಪತ್ರದ ಪ್ರಕಾರ ಖರೀದಿಸಿದ್ದು, ನಿಂಗೇಗೌಡ ಬಿನ್ ಜವರೇಗೌಡ ಅಷ್ಟು ಆಸ್ತಿಗೆ ಮಾತ್ರ ಹಕ್ಕುದಾರರು ಎಂದರೆ ಸಾಕ್ಷಿಯು ದಾಖಲಾತಿಯ ಪ್ರಕಾರ ಅಷ್ಟು ಆಸ್ತಿಗೆ ಮಾತ್ರ ಹಕ್ಕುದಾರರು ಆದರೆ ಅನುಭೋಗದಲ್ಲಿ 70 ಗುಂಟೆಯ ಆಸ್ತಿಯಲ್ಲಿದ್ದೇವೆ ಎಂದು ನುಡಿಯುತ್ತಾರೆ. ಈ ಕೇಸಿನಲ್ಲಿ ನಾವು ಹಾಜರುಪಡಿಸಿರುವ ದಾಖಲಾತಿಗಳ ಆಧಾರ ಮೇಲೆ ಲಿಖಿತ ತಕರಾರನ್ನು ತಯಾರಿಸಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇವೆ ಎಂದರೆ ಸರಿ. ನಮ್ಮ ಲಿಖಿತ ತಕರಾರಿನಲ್ಲಿ ನಾವು ಐಟಂ ನಂ.4 ರಲ್ಲಿ ಅನುಭೋಗದಲ್ಲಿರುವ ಚೆಕ್ಕುಬಂದಿಯನ್ನು ತೋರಿಸಿರುತ್ತೇವೆ. ಸಾಕ್ಷಿ ಮುಂದುವರೆದು ನಾವು ಅನುಭೋಗದಲ್ಲಿರುವ ಚೆಕ್ಕುಬಂದಿ ಹಾಗೂ ಕ್ರಯ ಪತ್ರದಲ್ಲಿರುವ ಚೆಕ್ಕುಬಂದಿ ಒಂದೇ ಇದೆ ಎನ್ನುತ್ತಾರೆ. 70 ಗುಂಟೆ ಆಸ್ತಿಯ ಪೂರ್ವಕ್ಕೆ ಕಡತನಾಳು ಪಟೇಲ್ ನಂಜೇಗೌಡ ರವರ ಮಗ ನಿಂಗೇಗೌಡ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹಾಲಿ ಕುಮಾರ್ ರವರ ಆಲೆಮನೆ, ದಕ್ಷಿಣಕ್ಕೆ ಜಯಲಕ್ಷ್ಮಮ್ಮ ರವರ ಜಮೀನು ಇದೆ. ಮೇಲೆ ಹೇಳಿರುವ ಚೆಕ್ಕುಬಂದಿ ದಿಃ 17.04.1973 ರಲ್ಲಿ ಆದ ಕ್ರಯ ಪತ್ರದಲ್ಲಿ ಇದೆಯಾ ಅಂದರೆ ಸಾಕ್ಷಿ ನಾನು ಕ್ರಯ ಪತ್ರವನ್ನು ಓದಿ ತುಂಬಾ ದಿನ ಆಗಿದ್ದು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿರುವ ಚೆಕ್ಕುಬಂದಿಯಲ್ಲಿ ನಾವು ಅನುಭೋಗದಲ್ಲಿ ಇದ್ದೇವೆ ಎಂದು ನಾನು ನನ್ನ ಲಿಖಿತ ತಕರಾರಿನಲ್ಲಿ ತಿಳಿಸಿರುತ್ತೇನೆ. ನಾವು ನಮ್ಮ ಲಿಖಿತ ತಕರಾರಿನಲ್ಲಿ ನಾವು ಖರೀದಿಸಿರುವುದು 70 ಗುಂಟೆ ಜಮೀನು ಅದನ್ನು ಕ್ರಯ ಪತ್ರದಲ್ಲಿ ತಪ್ಪಾಗಿ 1 ಎಕರೆ 22 ಗುಂಟೆ ಎಂದು ನಮೂದು ಮಾಡಲಾಗಿದೆ ಎಂದು ಹೇಳಿ ಬರೆಸಿರುವುದಿಲ್ಲ. ನಮ್ಮ ಲಿಖಿತ ತಕರಾರಿನಲ್ಲಿ ನಾವು ಖರೀದಿಸಿರುವುದು 70 ಗುಂಟೆ ಜಮೀನು ಅದನ್ನು ಕ್ರಯ ಪತ್ರದಲ್ಲಿ ತಪ್ಪಾಗಿ 1 ಎಕರೆ 22 ಗುಂಟೆ ಎಂದು ನಮೂದು ಮಾಡಲಾಗಿದೆ ಎಂದು ಹೇಳಿ ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಈ ಕೇಸನ್ನು 1 ಎಕರೆ 22 ಗುಂಟೆಗೆ ಹಾಕಿದ್ದು, ನಾವು ಅದಕ್ಕೆ ಆ ವಿಷಯ ಹೇಳಿಲ್ಲ ಎಂದು ಹೇಳುತ್ತಾರೆ. 1 ಎಕರೆ 22 ಗುಂಟೆ ಖರೀದಿಸಿದ ಕಾರಣ, ನೀವು 1 ಎಕರೆ 22 ಗುಂಟೆಗೆ ಮಾತ್ರ ಹಕ್ಕುದಾರರು ಉಳಿಕೆ ಜಮೀನಿಗೆ ಹಕ್ಕುದಾರರಲ್ಲ ಎಂದರೆ ಸಾಕ್ಷಿ ನಾವು 70 ಗುಂಟೆಯ ಜಮೀನಿನ ಅನುಬೋಗದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನಾವು 1 ಎಕರೆ 22 ಗುಂಟೆ ಜಮೀನಿಗೆ ಮಾತ್ರ ಹಕ್ಕುದಾರರಿದ್ದು ಉಳಿಕೆ ಜಮೀನಿಗೆ ಹಕ್ಕುದಾರರಲ್ಲ ಎಂದರೆ ಸಾಕ್ಷಿ ದಾಖಲಾತಿಯ ಪ್ರಕಾರ ನಮಗೆ ಹಕ್ಕಿಲ್ಲ ಆದರೆ ಯಾವುದೇ ವಿಭಾಗದ ಪತ್ರದಲ್ಲಿ 8 ಗುಂಟೆಯ ಬಗ್ಗೆ ನಮೂದು ಇಲ್ಲ ಎಂದು ನುಡಿಯುತ್ತಾರೆ.

4. ದಿಃ 17.04.1973 ರಂದು ಆದ ಕ್ರಯ ಪತ್ರದ ಪ್ರಕಾರ 1 ಎಕರೆ 22 ಗುಂಟೆಗೆ ಖಾತೆಯನ್ನು

ಮಾಡಿಸಿಕೊಂಡಿರುತ್ತೇವೆ. ಅನುಭೋಗದ ಪ್ರಕಾರ ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ಅನುಭೋಗದ ಪ್ರಕಾರವೇ ಖಾತೆ ಮಾಡಿಸಿಕೊಂಡಿರುವುದು ಎನ್ನುತ್ತಾರೆ. ದಿಃ 17.04.1973 ರ ಕ್ರಯಪತ್ರದಲ್ಲಿ ವಾದಿಯರ ಹೆಸರು ನಮೂದು ಇಲ್ಲ ಎಂದರೆ ಸರಿ. ದಿಃ 17.04.1973 ರಲ್ಲಿ ವಾದಿಯರು ಜನಿಸಿದ್ದರು ಎಂದರೆ ಸರಿ. ನಿಡಿ 3 ರ ಮೂಲ ಪ್ರತಿ ಕಳೆದುಹೋಗಿರುತ್ತದೆ. ನಮ್ಮ ಲಿಖಿತ ತಕರಾರಿನಲ್ಲಿ ನಿಡಿ 3 ರ ಮೂಲ ಪ್ರತಿ ಕಳೆದುಹೋಗಿದೆ ಎಂದು ಹೇಳಿ ಬರೆಸಿರುವುದಿಲ್ಲ. ನಿಡಿ 10 ಅನ್ನು ನಾನೇ ಹಾಜರುಪಡಿಸಿರುತ್ತೇನೆ. ನಿಡಿ 10 ರ ಪ್ರಕಾರ ಸರ್ವೆ ನಂ. 9/8 ರ ವಿಸ್ತೀರ್ಣ 62 ಗುಂಟೆ ಇದೆ ಎಂದರೆ ಸರಿ. ನಿಡಿ 10 ದಾಖಲಾತಿ ಎಂ ಆರ್ 2/87-88 ರಲ್ಲಿ ಆಗಿರುತ್ತದೆ ಎಂದರೆ ಸರಿ. 1973 ರಿಂದ 1987-88 ರವರೆಗೂ ನಾವು 70 ಗುಂಟೆಯ ಜಮೀನಿನ ಆಸ್ತಿಯಲ್ಲಿ ಅನುಭೋಗದಲ್ಲಿದ್ದೆವು. 1973 ರಿಂದ 1987-88 ರವರೆಗೂ ನಾವು 70 ಗುಂಟೆಯ ಜಮೀನಿನ ಆಸ್ತಿಯಲ್ಲಿ ಅನುಭೋಗದಲ್ಲಿದ್ದೆವು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. 1988 ರಿಂದ ಈವರೆಗೂ ನಾವು 70 ಗುಂಟೆಯ ಜಮೀನಿನ ಆಸ್ತಿಯಲ್ಲಿ ಅನುಭೋಗದಲ್ಲಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ಹಿರಿಯವರು ಯಾಕೆ ದಾಖಲಾತಿ ಮಾಡಿಲ್ಲ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾಖಲಾತಿಯ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದು ಭೌತಿಕವಾಗಿ ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರ ಮತ್ತು ಅನುಭೋಗದ ಆಧಾರದ ಮೇಲೆ ಭೌತಿಕವಾಗಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ನಮ್ಮ ಒಟ್ಟು ಕುಟುಂಬದ ಆಸ್ತಿಗಳ ವಿಭಾಗವಾಗಿದ್ದು ನಾನು ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಅದು ನೊಂದಾಯಿತ ವಿಭಾಗ ಪತ್ರವಾಗಿರುತ್ತದೆ. ಸದರಿ ವಿಭಾಗವು ನನ್ನ ತಾತ ನಿಂಗೇಗೌಡ ಮತ್ತು ಅವರ ತಂದೆ ಜವರೇಗೌಡ ರವರ ನಡುವೆ ಆಗಿರುತ್ತದೆ. ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇಲ್ಲ.

5. 1975 ರಲ್ಲಿ ಒಂದು ವ್ಯವಸ್ಥಾ ಪತ್ರವಾಗಿದ್ದು, ನಂತರ ನನ್ನ ತಂದೆ ಮತ್ತು ಅವರ ತಮ್ಮಂದಿರ ನಡುವೆ ಒಂದು ವಿಭಾಗವಾಗಿರುತ್ತದೆ. ಸದರಿ ವಿಭಾಗದ ಪ್ರಕಾರ ಐಟಂ ನಂ.4 ಆಸ್ತಿಯಲ್ಲಿ 62 ಗುಂಟೆ ನನ್ನ ಚಿಕ್ಕಪ್ಪನಾದ ಪ್ರಕಾಶ್ ಮತ್ತು ಅವರ ಪತ್ನಿ ಜಯಲಕ್ಷ್ಮಮ್ಮ ರವರಿಗೆ ಹೆಸರಿಗೆ ಹೋಗಿರುತ್ತದೆ. ವಿಭಾಗದ ಪ್ರಕಾರ ಐಟಂ ನಂ.4 ಆಸ್ತಿಯಲ್ಲಿ 62 ಗುಂಟೆ ನನ್ನ ಚಿಕ್ಕಪ್ಪನಾದ ಪ್ರಕಾಶ್ ಮತ್ತು ಅವರ ಪತ್ನಿ ಜಯಲಕ್ಷ್ಮಮ್ಮ ರವರಿಗೆ ಹೆಸರಿಗೆ ಹೋಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಆ ರೀತಿಯಾದ ಯಾವುದೇ ವಿಭಾಗ ಪತ್ರವನ್ನು ನಾನು

ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರಕಾಶ್ ಮತ್ತು ಜಯಲಕ್ಷ್ಮಮ್ಮ ರವರಿಗೆ ವಿಭಾಗ ಪ್ರಕಾರ 62 ಗುಂಟೆ ಬಂದಿಲ್ಲದ ಕಾರಣ ನಾನು ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗದ ಪೂರ್ವದಲ್ಲಿ ಸರ್ವೆ ನಂ. 9/8 ರಲ್ಲಿ 70 ಗುಂಟೆ ಇತ್ತು. ವಿಭಾಗದ ಪೂರ್ವದಲ್ಲಿ ಸರ್ವೆ ನಂ. 9/8 ರಲ್ಲಿ 70 ಗುಂಟೆ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜವರೇಗೌಡ ಬಿನ್ ಬೋರಲಿಂಗೇಗೌರವರ ಮಕ್ಕಳಿಗೆ ಸೇರಿದಂತಹ ಆಸ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ಅಪರಾಹ್ನಕ್ಕೆ ಮುಂದೂಡಲಾಗಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ